◆ **ಸಾಹಿತ್ಯದ ವಿದ್ಯಾರ್ಥಿಯಾದ ನೀವು ರಂಗಭೂಮಿಗೆ ಬಂದಿದ್ದು ಹೇಗೆ?**

ತಿಪಟೂರಿನಲ್ಲಿ ಓದುತ್ತಿದ್ದ ದಿನಗಳವು. ನಾನು ಮತ್ತು ಲೇಖಕ ನಟರಾಜ್ ಹುಳಿಯಾರ್ ಸಹಪಾಠಿಗಳು. ಇಬ್ಬರಿಗೂ ನಾಟಕದ ಗೀಳು. ತಿಪಟೂರಿನ ಕಲ್ಪತರು ಕಾಲೇಜಿನಲ್ಲಿ ನಾಟಕ ಸ್ಪರ್ಧೆಗಳು ನಡೆಯುತ್ತಿದ್ದವು. ನಟಿಸುವ ಆಸೆಯಿಂದ ರಂಗಭೂಮಿಗೆ ಬಂದೆ. ನಟನೆಯೇ ನನಗೆ ಮುಖ್ಯವಾಗಿತ್ತು. 'ದೇವರ ಹೆಣ' ನಾಟಕದಲ್ಲಿ ಅಭಿನಯಿಸಿದ್ದೆ. ಉತ್ತಮ ನಟ ಪ್ರಶಸ್ತಿ ಸಹ ಪಡದೆ. ನಂತರದ ದಿನಗಳಲ್ಲಿ ಇಂಗ್ಲಿಷ್ ಮತ್ತು ಕನ್ನಡ ಸಾಹಿತ್ಯದ ಒಡನಾಟವಿದ್ದ ಕಾರಣ ನಿರ್ದೇಶನದ ಕಡೆಗೆ ದೃಷ್ಟಿ ಹರಿಸಿದೆ.

◆ **ರೈತ ಮತ್ತು ದಲಿತ ಚಳವಳಿಗಳ ಜತೆ ಸಾಂಸ್ಕೃತಿಕ ಸಂಬಂಧ ಬೆಳೆಸಿದವರಲ್ಲಿ ನೀವು ಸಹ ಪ್ರಮುಖರು. ಇದು ನಿಮ್ಮ ಅರಿವನ್ನು ಹೇಗೆ ವಿಸ್ತರಿಸಿತು?**

ನನ್ನ ವಿದ್ಯಾಭ್ಯಾಸದ ದಿನಗಳಲ್ಲಿಯೇ ರೈತ ಮತ್ತು ದಲಿತ ಚಳವಳಿಗಳ ಪ್ರಭಾವ ನನ್ನ ಮೇಲೆ ಆಯಿತು. ರೈತ ಸಂಘದಲ್ಲಿ ಏಳು ವರ್ಷ ಕೆಲಸ ಮಾಡಿದೆ. ದಲಿತ ಹೋರಾಟಗಳಲ್ಲಿ ಪಾಲ್ಗೊಂಡೆ. ಆಗ ಅಲ್ಲಿ ಸಾಂಸ್ಕೃತಿಕವಾಗಿ ಕೆಲಸ ಮಾಡಲು ಪ್ರತ್ಯೇಕ ವಿಭಾಗ ಇರಲಿಲ್ಲ. ಹೀಗೆ ನಿಧಾನವಾಗಿ ಚಳವಳಿಗಳತ್ತ ಮುಖ ಮಾಡಿದೆ. ತುಮಕೂರಿನ ಸಮಾಜವಾದಿ ಅಧ್ಯಯನ ಕೇಂದ್ರದ ಸಂಪರ್ಕಕ್ಕೆ ಬಂದೆ. ಸ್ನೇಹಿತರಾದ ಶ್ರೀನಿವಾಸಮೂರ್ತಿ, ನಟರಾಜಪ್ಪ ಎಲ್ಲರೂ ಅಲ್ಲಿ ಸಕ್ರಿಯರಾಗಿದ್ದರು.

ರೈತ ಮುಖಂಡ ಪ್ರೊ. ಎಂ.ಡಿ. ನಂಜುಂಡಸ್ವಾಮಿ ನಮ್ಮ ಗುರು. ಅವರ ಮಾತಿನ ರೀತಿ, ವೈಚಾರಿಕ ಆಲೋಚನೆ ಅವರು ಕರ್ನಾಟಕ ಮತ್ತು ರೈತರನ್ನು ನೋಡುತ್ತಿದ್ದ ಕ್ರಮ ನನ್ನ ಮೇಲೆ ಪ್ರಭಾವ ಬೀರಿತು. ತಿಪಟೂರು ಸುತ್ತ ನಡೆಯುತ್ತಿದ್ದ ರೈತರ ಸಭೆಗಳಲ್ಲಿ ನಂಜುಂಡಸ್ವಾಮಿ ಅವರ ತರಹವೇ ಅಂಕಿ ಅಂಶಗಳನ್ನು ಕೊಟ್ಟು ಮಾತನಾಡುತ್ತಿದ್ದೆ. ತಡಸೂರು ಗುರುಮೂರ್ತಿ, 'ನೀವು ನಂಜುಂಡಸ್ವಾಮಿ ರೀತಿ ಮಾತನಾಡುತ್ತೀರಿ. ನಟರಾಜ ಹೊನ್ನವಳ್ಳಿಯಂತೆ ಮಾತನಾಡಿ' ಎನ್ನುತ್ತಿದ್ದರು.

ಶಿರಾ ತಾಲ್ಲೂಕಿನ ಕಳ್ಳಂಬೆಳ್ಳದಲ್ಲಿ ರಾಜಕಾರಣಿ ರಾಮಮನೋಹರ ಲೋಹಿಯಾ ಅವರ 'ಇತಿಹಾಸ ಚಕ್ರ' ಕೃತಿಯನ್ನು ಆಧಾರವಾಗಿಟ್ಟುಕೊಂಡು ದೊ. ರಂಗೇಗೌಡರ ಮನೆಯಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಹಲವು ಸಮಾಜವಾದಿಗಳೂ ಅದರಲ್ಲಿ ಭಾಗಿಯಾಗಿದ್ದರು. ನಾಟಕದ ಆಯ್ಕೆಯನ್ನು ಯಾವ ರೀತಿ ಮಾಡಿಕೊಳ್ಳಬೇಕು, ಯಾವ ಪಠ್ಯವನ್ನು ರಂಗಕ್ಕೆ ಅಳವಡಿಸಿಕೊಳ್ಳಬೇಕು ಎನ್ನುವುದನ್ನು ಕಲಿಸಿದ್ದೇ ಇಂತಹ ಕಾರ್ಯಾಗಾರ ಮತ್ತು ಚಳವಳಿಗಳು.

ಹಾಸನದಲ್ಲಿ ನಡೆದ ರೈತರ ಸಭೆಯಲ್ಲಿ ಪಾಲ್ಗೊಂಡಿದ್ದೆ. ಇದು ನಾನು ಪಾಲ್ಗೊಂಡಿದ್ದ ರೈತರ ಮೊದಲ ಸಭೆ. ರಾಜಕಾರಣಿ ಕಿಶನ್ ಪಟ್ನಾಯಕ್, ಕಲಾವಿದ ಕೆ.ಟಿ. ಶಿವಪ್ರಸಾದ್, ಆರ್.ಪಿ. ವೆಂಕಟೇಶಮೂರ್ತಿ, ಮಂಜುನಾಥ ದತ್ತ ಹೀಗೆ ದೈತ್ಯ ಹೋರಾಟಗಾರರೇ ಅಲ್ಲಿದ್ದರು. ನಾವೆಲ್ಲ ಚಿಲ್ಲಾರಿಗಳು.

◆ **ನೀವು ರೈತ ಕುಟುಂಬದಿಂದ ಬಂದವರಲ್ಲ. ಆದರೂ ರೈತ ಚಳವಳಿ ನಿಮ್ಮ ಮೇಲೆ ಪ್ರಭಾವ ಬೀರಿದ್ದು ಹೇಗೆ?**

ಹೌದು, ನಾನು ರೈತ ಅಲ್ಲ. ಜಮೀನು ಇಲ್ಲ. ಓದು ಮತ್ತು ವೈಚಾರಿಕ ಆಲೋಚನೆಯಿಂದ ಸಮಾಜವಾದಿ ಹೋರಾಟಗಳ ತೆಕ್ಕೆಗೆ ಹೋದವನು. 'ಇಷ್ಟೆಲ್ಲ ಹೇಳ್ತಿಯಲ್ಲ, ನಿನಗೆ ಬೇಸಾಯ ಮಾಡುವುದಕ್ಕೆ ಬರುತ್ತ' ಎಂದು ನನ್ನನ್ನು ಕೆಲವರು ಗೇಲಿ ಮಾಡುತ್ತಿದ್ದರು. ಆದರೆ ನನಗೆ ರೈತರ ಬದುಕು, ಕಷ್ಟ, ಅವರ ಮೇಲೆ ಸರ್ಕಾರಗಳ ನೀತಿಗಳು ಬೀರುತ್ತಿದ್ದ ಪ್ರಭಾವದ ಅರಿವು ಇರುತ್ತಿತ್ತು.

ಲೋಹಿಯಾ ಅವರ 'ರಾಜಕೀಯದ ಮಧ್ಯೆ ಬಿಡುವು' ಪುಸ್ತಕ ಓದಿದ್ದೆ. ಕನ್ನಡ ಮೇಸ್ಟ್ರು